3. 2001-02ನೇ ಸಾಲಿನ ಈ ವರ್ಷಕ್ಕಾಗಿ ಜಿಲ್ಲಾ ಮುಖ್ಯ ರಸ್ತೆಯ ಅಭಿವೃದ್ಧಿಗಾಗಿ ರೂ.15.12 ಲಕ್ಷಗಳನ್ನು ಕಾಯ್ದಿರಿಸಲಾಗಿದ್ದು ಇದರಲ್ಲಿ ವಾರ್ಷಿಕ ದುರಸ್ತಿ ಅಂದರೆ ಜಂಗಲ್ ತೆಗೆಯುವುದು, ಚರಂಡಿ ತೋಡುವುದು, ಗುಂಡಿ ಮುಚ್ಚುವುದು, ಹಾಗೂ ವಿಶೇಷ ದುರಸ್ತಿ ನವೀಕರಣ ಕಾಮಗಾರಿಗಳನ್ನು ನಿರ್ವಹಿಸಲು ಯೋಜಿಸಲಾಗಿದೆ.

ಪಾಂಡವಪುರ-ನಾಗಮಂಗಲ-ಬೆಳ್ಳೂರು-ಆದಿಚುಂಚನಗಿರಿ ರಸ್ತೆಗಳ ಅಭಿವೃದ್ಧಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 712(923)

ಸದಸ್ಯರ ಹೆಸರು : ಶ್ರೀ ಚಲುವರಾಯ ಸ್ವಾಮಿ ಎನ್.(ನಾಗಮಂಗಲ)

ಉತ್ತರಿಸುವ ಸಚಿವರು : ಶ್ರೀ ಧರ್ಮಸಿಂಗ್(ಲೋಕೋಪಯೋಗಿ ಸಚಿವರು)

ಪ್ರಶ್ನೆ

1. ಪಾಂಡವಪುರ-ನಾಗಮಂಗಲ-ಆದಿಚುಂಚನಗಿರಿ ರಾಜ್ಯ ಹೆದ್ದಾರಿಯು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಕಳೆದ 3 ವರ್ಷಗಳಲ್ಲಿ ಇದರ ಅಭಿವೃದ್ಧಿಗೆ ಮಾಡಿರುವ ವೆಚ್ಚ ಎಷ್ಟು? ಮಾಡಿರುವ ಅಭಿವೃದ್ಧಿ ಕಾರ್ಯಗಳು ಯಾವುವು?

2. ಪ್ರಸಕ್ತ ಸಾಲಿನಲ್ಲಿ ಈ ರಸ್ತೆಯ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳೇನು ನಿಗಧಿ ಪಡಿಸಿರುವ ಹಣ ಎಷ್ಟು?

ಉತ್ತರ

1. ಈ ರಾಜ್ಯ ಹೆದ್ದಾರಿಗೆ ದುರಸ್ತಿಯ ಅವಶ್ಯಕತೆ ಸರ್ಕಾರದ ಗಮನಕ್ಕೆ ಬಂದಿದೆ.

ಕಳೆದ ಮೂರು ವರ್ಷಗಳಲ್ಲಿ ಅಂದರೆ 1998-99 ರಿಂದ 2000-2001 ವರ್ಷದಲ್ಲಿ ಈ ರಾಜ್ಯ ಹೆದ್ದಾರಿಯ ಆಯ್ದ ಭಾಗಗಳ 3.45 ಕಿಮೀ. ಉದ್ದಕ್ಕೆ ಜೆಲ್ಲಿ ಬಿಚಾವಣೆ, 23.12 ಕಿಮೀ. ಉದ್ದಕ್ಕೆ ಡಾಂಬರೀಕರಣ, ಆರು ಅಡ್ಡ ಮೋರಿಗಳ ದುರಸ್ತಿ ಹಾಗೂ 2 ಸೇತುವೆಗಳ ನಿರ್ಮಾಣ ಕೈಗೊಂಡು ಒಟ್ಟಾರೆ ರೂ.161.86 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ.

2. ಪಾಂಡವಪುರ-ನಾಗಮಂಗಲ ರಾಜ್ಯ ಹೆದ್ದಾರಿಯು ಬೀದರ್ ಶ್ರೀರಂಗಪಟ್ಟಣ

ರಾಜ್ಯ ಹೆದ್ದಾರಿಯ ಭಾಗವಾಗಿದ್ದು ಈ ರಸ್ತೆಯನ್ನು ವಿಶ್ವಬ್ಯಾಂಕ್ ಯೋಜನೆಯಲ್ಲಿ ಅಭಿವೃದ್ಧಿ ಪಡಿಸಲಾಗುವುದು.

ಶ್ರೀರಂಗಪಟ್ಟಣ-ನಲ್ಲಿಗೆರೆ ಭಾಗ 62.96 ಕಿಮೀ. ಪುನಶ್ಚೇತನಗೊಳಿಸಲು 21.24 ಕೋಟಿ ರೂ.ಗಳೆಂದು ಅಂದಾಜಿಸಿದೆ. ಈ ವಿಶ್ವಬ್ಯಾಂಕ್ ಯೋಜನೆ ಕಾಮಗಾರಿ ಪ್ರಾರಂಭವಾಗುವವರೆಗೆ ರಸ್ತೆಯ ನಿರ್ವಹಣೆಗಾಗಿ ರೂ.5.00 ಲಕ್ಷ ಅನುದಾನವನ್ನು ನಿಗದಿಪಡಿಸಿದೆ.

ಮಂಡ್ಯ ಜಿಲ್ಲೆಯಲ್ಲಿ ಅರಣ್ಯಾಭಿವೃದ್ಧಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 713(924)

ಸದಸ್ಯರ ಹೆಸರು : ಶ್ರೀ ಚಲುವರಾಯಸ್ವಾಮಿ ಎನ್.(ನಾಗಮಂಗಲ)

ಉತ್ತರಿಸುವ ಸಚಿವರು : ಶ್ರೀ ಕೆ.ಎಚ್.ರಂಗನಾಥ್(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಪ್ರಶ್ನೆ

1) ಮಂಡ್ಯ ಜಿಲ್ಲೆಯಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣ ಎಷ್ಟು? ದರ್ಜೆವಾರು: ತಾಲ್ಲೂಕುವಾರು ವಿವರ ಒದಗಿಸುವುದು?

2) ಕಳೆದ 3 ವರ್ಷಗಳಲ್ಲಿ ಈ ಅರಣ್ಯಗಳ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳು, ಮಾಡಿದ ಖರ್ಚು ಎಷ್ಟು ವಿವರ ಒದಗಿಸುವುದು?

3) ಮೇಲುಕೋಟೆಯ ಅರಣ್ಯವನ್ನು ರಕ್ಷಿತ ಅಭಯಾರಣ್ಯ ಎಂದು ಘೋಷಿಸಿ ಅದರ ಅಭಿವೃದ್ಧಿಗೆ ವಿಶೇಷ ಯೋಜನೆ ಹಾಕಿಕೊಳ್ಳಲಾಗುವುದೇ?

ಉತ್ತರ

1) ಒಟ್ಟು ವಿಸ್ತೀರ್ಣ 67521.01 ಹೆಕ್ಟೇರುಗಳು, ಅರಣ್ಯ ವಲಯವಾರು ವಿವರಗಳು ಈ ಕೆಳಕಂಡಂತೆ ಇದೆ.